ಈ) ಹಾಗಿದ್ದಲ್ಲಿ ಜಿಲ್ಲೆಗೊಂದು ಶಿಕ್ಷಕರ ಸದನ ಕಟ್ಟಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ವತಿಯಿಂದ ರಾಜ್ಯದ ಎಲ್ಲಾ ವರ್ಗಗಳ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಂಗಳೂರಿನ ಸೆಂಟ್ರಲ್ ಜೂನಿಯರ್ ಕಾಲೇಜು, ಆವರಣದಲ್ಲಿ ಶಿಕ್ಷಕರಸದನ ನಿರ್ಮಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಸದನ ನಿರ್ಮಾಣದ ಅಂದಾಜು ವೆಚ್ಚ ರೂ. 8.20 ಕೋಟಿ.

ಆ) ಇಲ್ಲ

ಇ) ಈ ಶಿಕ್ಷಕರ ಸದನದ ನಿರ್ಮಾಣಕ್ಕೆ ಶಿಕ್ಷಕರಿಂದ ದೇಣಿಗೆಯನ್ನು ಕಡ್ಡಾಯವಾಗಿ ಸಂಗ್ರಹಿಸುತ್ತಿಲ್ಲ. ಜಿಲ್ಲಾ ಕೇಂದ್ರಗಳಲ್ಲಿ ಶಿಕ್ಷಕರ ಸದನ ನಿರ್ಮಿಸಲು ಒತ್ತಾಯ ಬರುತ್ತಿದೆ.

ಈ) ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಶಿಕ್ಷಕರ ಸದನ ನಿರ್ಮಿಸಲು ಶಿಕ್ಷಕರ ಸಂಘಗಳಿಂದ ಕೋರಿಕೆಗಳು ಬರುತ್ತಿದ್ದು, ಇವುಗಳನ್ನು ನಿಧಿಗಳ ನಿಯಮದಡಿಯಲ್ಲಿ ಪರಿಶೀಲಿಸಿ ಕ್ರಮಕೈಗೊಳ್ಳಲಾಗುತ್ತಿದೆ.

ಬೇಲೂರು ತಾಲ್ಲೂಕಿಗೆ ವಾರ್ತಾ ಇಲಾಖೆಯು ನೀಡಿರುವ ಸವಲತ್ತುಗಳು

1254(526) ಶ್ರೀ ಪುಟ್ಟರಂಗನಾಥ ಎಸ್.ಜೆಚ್. (ಬೇಲೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿನಲ್ಲಿ ಇದುವರೆವಿಗೂ ವಾರ್ತಾ ಇಲಾಖೆಯಿಂದ ಯಾವ ಯಾವ ಸವಲತ್ತುಗಳನ್ನು ನೀಡಲಾಗಿದೆ? (ಪೂರ್ಣ ವಿವರ ನೀಡುವುದು)

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು) :

ಅ) ಬೇಲೂರು ತಾಲ್ಲೂಕಿನಲ್ಲಿ ವಾರ್ತಾ ಇಲಾಖೆಯಿಂದ 1991 ರಿಂದ 2002ನೇ ಆವಧಿವರೆವಿಗೆ 21 ಗ್ರಾಮಗಳ ಪರಿಶಿಷ್ಟ ಜಾತಿ : ವರ್ಗದ ಕಾಲೋನಿಗಳಿಗೆ ಬಣ್ಣದ ದೂರದರ್ಶನ ಸೆಟ್ಟುಗಳನ್ನು ಒದಗಿಸಲಾಗಿದೆ. (ಗ್ರಾಮದ ಪಟ್ಟಿ ಲಗತ್ತಿಸಿದೆ)

ಬೇಲೂರು ತಾಲ್ಲೂಕಿನಲ್ಲಿ ವಾರ್ತಾ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ : ವರ್ಗದ ಜನರಿಗೆ ಒದಗಿಸಲಾಗಿರುವ ಬಣ್ಣದ ದೂರದರ್ಶನ ಸೆಟ್ಟುಗಳ ವಿವರ

ಕ್ರ. ಸಂ.	ಗ್ರಾಮದ ಹೆಸರು	ಪಂಚಾಯಿತಿ	ಒದಗಿಸಿದ ದಿನಾಂಕ
1.	ರಾಜಗೆರೆ	ಗೋಣಿಸೋಮನ ಮಂಡಲ	28-05-91
2.	ಪಡವಳಲು	ಚಿಕ್ಕೋಡು ಮಂಡಲ	22-03-91
3.	ಹಾರೋಹಳ್ಳಿ	ಬಿಲ್ಲೇನಹಳ್ಳಿ	12-04-91
4.	ಹನಿಕೆ	ಹನಿಕೆ	27-07-92
5.	ತೆಂಡೇಕೆರೆ	ಖಿಲ್ಲೇನಹಳ್ಳಿ	07-08-92
6.	ದೊಡ್ಡಬ್ಯಾಡಗೆರೆ	ಹೆಬ್ಬಾಳು	25-08-92
7.	ನಾರಾಯಣಪುರ	ಹನಿಕೆ	13-08-92